ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ನ್ಯಾಯಾಲಯ, ಹುಬ್ಬಳ್ಳಿ

ಸಿ.ಸಿ.ನಂ.8415/2024

ಪಿರ್ಯಾದಿ : ಬಿ ಡಿ ಪಾಟೀಲ, ಎಂಟರಪ್ರೈಜಸ್
ಗುಮ್ಮನಹಳ್ಳಿ ರೋಡ, ಬ್ಯಾಡಗಿ,
ಪ್ರತಿನಿಧಿಸುವವರು ಇದರ ಪಾಲುದಾರರಾದ
ಕಾರ್ತಿಕ ಜಗದೀಶ ಪಾಟೀಲ,
ವಿದ್ಯಾನಗರ, ಹುಬ್ಬಳ್ಳಿ.

ವಿರುದ್ಧ

ಆರೋಪಿ : ಶ್ರೀ ನಾಗರಾಜ ತಂದೆ ಶಂಕರಪ್ಪ ಬಣಕಾರ,
ವಯಾಃ40 ವರ್ಷ, ಉಃ ಪ್ರೊಪ್ರೈಟರ್
ಓಂ ಎಂಟರಪ್ರೈಜಸ್, ಬಸವೇಶ್ವರ ನಗರ,
ಬ್ಯಾಡಗಿ, ಜಿಲ್ಲೆ ಹಾವೇರಿ.

ಆಪಾದನೆ

ಆರೋಪಿಯಾದ ನೀವು ಹಾಗೂ ಪಿರ್ಯಾದುದಾರರು ಮೆಣಸಿನಕಾಯಿ ವ್ಯಾಪಾರಸ್ಥರಿದ್ದು, ದೂರುದಾರರು ಬ್ಯಾಡಗಿಯ ಎಪಿಎಂಸಿ ಯಾರ್ಡ್‌ನ ರೋಹಿತ್ ಎಂಟರ್‌ಪ್ರೈಸಸ್‌ನೊಂದಿಗೆ ವ್ಯವಹಾರವನ್ನು ಹೊಂದಿದ್ದು, ದೂರುದಾರರು ರೋಹಿತ್ ಎಂಟರ್‌ಪ್ರೈಸಸ್‌ರವರ ಖಾತೆಯ ಬದಲಾಗಿ ಆರೋಪಿಯಾದ ನಿಮ್ಮ ಖಾತೆಗೆ ಒಟ್ಟು ರೂ. 16,53,905/- ಗಳನ್ನು ವರ್ಗಾಯಿಸಿದ್ದು, ದೂರುದಾರರು ಆರೋಪಿಯಾದ ನಿಮ್ಮನ್ನು ಸಂಪರ್ಕಿಸಿ ರೂ. 16,53,905/- ಹಿಂದಿರುಗಿಸಲು ವಿನಂತಿಸಿದಾಗ, ಸದರಿ ಮೊತ್ತವನ್ನು ಮರುಪಾವತಿಸಲು ನೀವು . ರೂ.14,53,905/-ಮೌಲ್ಯದ ಒಂದು ಚೆಕ್ ಸಂಖ್ಯೆ: 238071 ದಿನಾಂಕ 01.08.2023 ಎಂದು ನಮೂದಿಸಿ ಯುನಿಯನ್ ಬ್ಯಾಂಕ್ ಅಫ್ ಇಂಡಿಯಾ, ಬ್ಯಾಡಗಿ ಶಾಖೆಯ ಚೆಕ್ಕನ್ನು ನೀಡಿದ್ದು, ಪಿರ್ಯಾದುದಾರರು ಆ ಚೆಕ್ಕನ್ನು ತಾವು ಖಾತೆ ಹೊಂದಿರುವ ಬ್ಯಾಂಕ್ ಆದ ಎಕ್ಸಿಸ್ ಬ್ಯಾಂಕ್, ನ್ಯೂ ಕಾಟನ್ ಮಾರ್ಕೆಟ್, ಹುಬ್ಬಳ್ಳಿ

ಶಾಖೆಗೆ ನಗದೀಕರಣಗೊಳಿಸಲು ಹಾಜರುಪಡಿಸಿದಾಗ ಖಾತೆಯಲ್ಲಿ "ಸಾಕಷ್ಟು ಹಣ ಇರುವುದಿಲ್ಲ" ಎಂಬ ಷರಾದೊಂದಿಗೆ ದಿನಾಂಕ 02.08.2023 ರಂದು ಚೆಕ್ಕು ಅಮಾನ್ಯಗೊಂಡಿದ್ದು, ಆ ಬಗ್ಗೆ ಪಿರ್ಯಾದಿ ತಮ್ಮ ವಕೀಲರ ಮುಖಾಂತರ ನಿಮಗೆ ದಿನಾಂಕ 10.11.2023 ರಂದು ಕಾನೂನುಬದ್ಧ ತಿಳುವಳಿಕೆ ಪತ್ರವನ್ನು ನೊಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ನೀವು ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಮತ್ತು ಪಿರ್ಯಾದಿಗೆ ಮೋಸ ಮತ್ತು ನಷ್ಟ ಮಾಡುವ ಉದ್ದೇಶದಿಂದ ಬ್ಯಾಂಕ್‌ನಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಚೆಕ್ಕನ್ನು ಕೊಟ್ಟು ನೀವು ವರ್ಗಾವಣೆ ಲಿಖಿತಗಳ ಅಧಿನಿಯಮ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆ:**1** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ:

ಪ್ರಶ್ನೆ:**2** ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರ:

(ದಿನಾಂಕ **17.09.2025** ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆಪಾದನೆಯನ್ನು ಓದಿ ಹೇಳಿ, ತಿಳಿಸಿ, ಸರಿ ಇದೆ ಎಂದು ಉತ್ತರವನ್ನು ನೀಡಿರುತ್ತಾರೆ)

ಸ್ಥಳ: ಹುಬ್ಬಳ್ಳಿ
ದಿನಾಂಕ:**17/09/2025**

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ, ಹುಬ್ಬಳ್ಳಿ.